
# ನೀಲದ ಉಂಗುರ

■ ವಸುಮತಿ ಉಡುಪ



ಅದು ಜಗಳವೆಂದರೆ ಜಗಳವೇನಲ್ಲ. ಒಂದು ಸಣ್ಣ ಮನಸ್ತಾಪ. ಸೊಸೆ ದನಿ ಏರಿಸಿ ಮಾತಾಡಿರಲಿಲ್ಲ. ನಯವಾಗಿಯೇ ತನ್ನ ಅಸಮಾಧಾನ ವ್ಯಕ್ತಪಡಿಸಿದ್ದಳು. ‘ಸುಮ್ನಿರಿ ಅತ್ತೆ, ನಿಮಗೆ ಏನೂ ಗೊತ್ತಾಗಲ್ಲ. ಈ ಕಾಲದಲ್ಲಿ ಕೆಲಸಕ್ಕೆ ಸರಿಯಾದ ಜನ ಸಿಗೋದೇ ಕಷ್ಟ. ನಾವು ಅನುಸರಿಸಿಕೊಂಡು ಹೋಗ್ಬೇಕು...’

‘ಅಲ್ವೇ, ಪಲ್ಯ ಸೀದು ತಳ ಹತ್ತೋಕೆ ಬಂದಿತ್ತು. ಗಂಟೆಗಟ್ಟಲೆ ಮೊಬೈಲ್ ಹಿಡ್ಕೊಂಡು ಅದೆಂತಾ ಮಾತು? ಮಾತಾಡ್ಲಿ, ಬೇಡ ಅನ್ನಲ್ಲ. ಆದರೆ ಕೆಲಸದ ಮೇಲೂ ನಿಗಾ ಇರ್ಬೇಕಲ್ವಾ?’

‘ಅವರೂ ನಮ್ಹಾಗೆ ಮನುಷ್ರೇ ಅಲ್ವಾ? ಒಂದೊಂದ್ಸಲ ಪರಾಮೋಷಿ ಆಗುತ್ತಪ್ಪಾ...’

‘ಸಾವಿರಗಟ್ಲೆ ದುಡ್ಡು ಸುರಿಯಲ್ವಾ? ಸಂಬಳ ತಿಂತಾರೆ ಅಂದ್ಮೇಲೆ ಅದಕ್ಕೆ ತಕ್ಕ ಹಾಗೆ...’

‘ಸುಮ್ನಿರಿ ಅಂದ್ನಲ್ಲ ಅತ್ತೆ? ನಿಮಗೆ ಏನೂ ಗೊತ್ತಾಗಲ್ಲ...’

ಮತ್ತದೇ ಏನೂ ಗೊತ್ತಾಗದ ನನ್ನ ದಡ್ಡತನದ ಕುರಿತಾದ ಮಾತು. ಯಾರು ನಾನು? ಏಳೆಂಟು ಆಳುಗಳಿಗೆ ಕೆಲಸ ಕೊಟ್ಟು ಯಜಮಾನಿಕೆ ಮಾಡಿಕೊಂಡಿದ್ದ ದೊಡ್ಡ ಹಿಡುವಳಿಯ ಕುಟುಂಬದ ಹಿರಿ ಸೊಸೆ. ತಾನು ಹಾಕಿದ ಗೆರೆ ದಾಟುತ್ತಿರಲಿಲ್ಲ ಗಂಡ. ಆಗಿನಷ್ಟು ಸಾಹುಕಾರಿಕೆ ಇಲ್ಲದಿದ್ದರೂ ಈಗಲೂ ಊರಲ್ಲಿ ದೊಡ್ಡ ಜಮೀನ್ದಾರರು ಎನ್ನುವ ಗೌರವದ ಸ್ಥಾನ ತಮಗೆ ಇದ್ದೇ ಇದೆ. ಕೆಲಸಕ್ಕೆ ಆಳುಗಳು ಸಿಗುವುದು ಕಷ್ಟವಾಗಿದ್ದರೂ, ಅವರ ಸ್ಥಾನವನ್ನು ಯಂತ್ರೋಪಕರಣಗಳು ಆಕ್ರಮಿಸಿಕೊಂಡು ಹೇಗೋ ನಡೆಯುತ್ತಿದೆ ಪಥ. ಬೆಳಿಗ್ಗೆ ಏಳುತ್ತಿದ್ದಂತೆ ಜಮೀನಿನ ಕಡೆ ಕಾಲಾಡಿಸಿಕೊಂಡು ಬರದಿದ್ದರೆ ಯಜಮಾನರಿಗೆ ತಿಂದನ್ನ ಅರಗುವುದಿಲ್ಲ. ‘ಬನ್ನಿ ಸ್ವಲ್ಪ ದಿನ...’ ಮಗ ಪ್ರೀತಿಯಿಂದ ಆಹ್ವಾನಿಸಿದ್ದ.

‘ನೀನು ಬೇಕಾದ್ರೆ ಹೋಗ್ಬಾ. ನನ್ನ ಎಲ್ಲಿಗೂ ಕರೀಬೇಡ’ ಅಂದಿದ್ದರು ಗಂಡ.

‘ಯಾಕೆ? ದೊಡ್ಡಮನುಷ್ರನ್ನ ಅಕ್ಷತೆ ಕೊಟ್ಟು ಕರೀಬೇಕಿತ್ತಾ?’

‘ಅಲ್ಲಿದ್ರೆ ಹೊತ್ತು ಹೋಗಲ್ಲ ಕಣೇ ನಂಗೆ. ಕಟ್ಟಿ ಹಾಕಿದ ಹಾಗಾಗುತ್ತೆ’.

‘ನೆಪ ಹೇಳ್ಬೇಡಿ. ಮೊಮ್ಮಗ ಅಂಬೆಗಾಲಿಡೋಕೆ ಕಲ್ತಿದಾನಂತೆ. ಬರೀ ಮೊಬೈಲಲ್ಲಿ ಅವನ ಚಂದ ನೋಡಿದ್ರೆ ಸಾಕಾ?’

‘ಅವರಿಗೇ ಎರಡು ದಿನ ಬಂದು ಹೋಗೋಕೆ ಹೇಳಿದ್ರಾಯ್ತಪ್ಪಾ...’

‘ಎರಡು ದಿನಕ್ಕೆ ಅಷ್ಟು ದೂರದಿಂದ ಓಡಿ ಬರ್ಬೇಕಾ? ರಜ ಸಿಗೋದೇ ಕಷ್ಟ ಅಂತಾನೆ ಮಗ. ನಾವಾದ್ರೆ ನೆಮ್ಮದಿಯಾಗಿ ಹದಿನೈದು ದಿನ ಇದ್ದು ಬರ್ಬೋದು. ಇಲ್ಲಿ ತಲೆ ಹೋಗೋದು ಅಷ್ಟ್ರಲ್ಲೇ ಇದೆ’.

ರಾಜಿಸಂಧಾನಕ್ಕೆ ಬಂದಿದ್ದಳು ಮಗಳು.

‘ಅಪ್ಪನಿಗೆ ಮನಸ್ಸಿಲ್ಲದಿದ್ರೆ ಬೇಡ. ನೀನು ಮಾರಾಯ್ತಿಯಾಗಿ ಹೋಗಿ ಬಾ. ಮಕ್ಕಳಿಗೆ ಬೇಸಿಗೆ ರಜ ಬರ್ತಿದೆಯಲ್ಲ, ನಾನು ಬಂದು ಅಲ್ಲಿರ್ತೀನಿ...’

‘ಅಲ್ವೇ, ನೀನು ತೌರಿಗೆ ಬಂದಾಗ ನಾನು ಅಲ್ಲಿ